ಕಂದಾಯ ಇಲಾಖೆ

ಜಿಲ್ಲಾಧಿಕಾರಿಯವರ ಕಛೇರಿ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.

ನಂ.ಸಿಬ್ಬಂದಿ(1) ಸಿಆರ್ 73/2015-16, ದಿನಾಂಕ: 06-10-2015

ಅಧಿಸೂಚನೆ

ಗ್ರಾಮ ಲೆಕ್ಕಿಗರ ಹುದ್ದೆಗಳಿಗೆ ನೇಮಕಾತಿ ಬಗ್ಗೆ ಅರ್ಜಿ ಆಹ್ವಾನ

ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯ ಶಿವಮೊಗ್ಗ ಜಿಲ್ಲಾ ಘಟಕದಲ್ಲಿ ಬರುವ ತಾಲ್ಲೂಕಗಳಲ್ಲಿ 2014-15 ನೇ ಸಾಲಿನಲ್ಲಿ ಖಾಲಿಇರುವ ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ಕರ್ನಾಟಕ ಸಾಮಾನ್ಯ ಸೇವೆಗಳು (ರೆವಿನ್ಯೂ ಸಬಾರ್ಡಿನೇಟ್ ಬ್ರಾಂಚ್) (ಕೇಡರ್ ಅಂಡ್ ರಿಕ್ರೂಟ್ ಮೆಂಟ್) (ತಿದ್ದುಪಡಿ) ನಿಯಮಗಳು 2008 ಮತ್ತು 2009 ರನ್ವಯ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಆನ್ ಲೈನ್ ಮೂಲಕವಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಗ್ರಾಮಲೆಕ್ಕಿಗರ ಖಾಲಿ ಇರುವ ಹುದ್ದೆಗಳು ಹಾಗೂ ಹುದ್ದೆಗಳ ವರ್ಗೀಕರಣ ಈ ಕೆಳಗಿನಂತಿದೆ.

2015-16 ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಖಾಲಿ ಹುದ್ದೆಗಳು

( ರೋಸ್ಟರ್ ಬಿಂದು ಕ್ರಸಂ 32 ರಿಂದ 100 ಹಾಗೂ 01 ರಿಂದ 21 ರವರೆಗೆ)

| ಕ್ರಸಂ. | ವರ್ಗೀಕರಣದ ವಿವರ | ಖಾಲಿ ಇರುವ ಹುದ್ದೆಗಳು | ಇತರೆ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕರು | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ಒಟ್ಟು |
|---|---|---|---|---|---|---|---|---|---|---|
| 1 | ಪ. ಜಾತಿ | 13 | 03 | 04 | 04 | 0 | 01 | 01 | 0 | 13 |
| 2 | ಪ. ಪಂಗಡ | 03 | 01 | 01 | 01 | 0 | 0 | 0 | 0 | 03 |
| 3 | ಪ್ರವರ್ಗ-1 | 03 | 02 | 0 | 01 | 0 | 0 | 0 | 0 | 03 |
| 4 | ಪ್ರ-II (A) | 13 | 03 | 04 | 04 | 0 | 01 | 01 | 0 | 13 |
| 5 | ಪ್ರ-II (B) | 04 | 02 | 01 | 01 | 0 | 0 | 0 | 0 | 04 |
| 6 | ಪ್ರ- III(A) | 04 | 02 | 01 | 01 | 0 | 0 | 0 | 0 | 04 |
| 7 | ಪ್ರ-III (B) | 05 | 02 | 02 | 01 | 0 | 0 | 0 | 0 | 05 |
| 8 | ಸಾಮಾನ್ಯ | 45 | 08 | 13 | 12 | 04 | 05 | 01 | 02 | 45 |
| ಒಟ್ಟು | | **90** | **23** | **26** | **25** | **04** | **07** | **03** | **02** | **90 *** |

- * ಹುದ್ದೆಗಳ ಸಂಖ್ಯೆಯನ್ನು ಕಡಿಮೆ ಅಥವಾ ಹೆಚ್ಚು ಮಾಡುವ ಅಧಿಕಾರ ನೇಮಕಾತಿ ಪ್ರಾಧಿಕಾರ ಹೊಂದಿರುತ್ತದೆ.

| | |
|---|---|
| ವೇತನ ಶ್ರೇಣಿ: | ರೂ. 11600-200-12000-250-13000-300-14200-350-15600-400-17200-450- 19000- 500-21000 |
| <u>ಶೈಕ್ಷಣಿಕ ವಿದ್ಯಾರ್ಹತೆ:</u> | 1. ಕರ್ನಾಟಕ ಸರ್ಕಾರದ ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ನಡೆಸಲಾದ ಪ್ರಿಯುನಿವರ್ಸಿಟಿ ಪರೀಕ್ಷೇ ಯಲ್ಲಿ ಉತ್ತೀರ್ಣಾರಾಗಿರಬೇಕು |
| | 2. ಸೆಂಟ್ರಲ್ ಬೋರ್ಡ ಆಫ್ ಸೆಕೆಂಡರಿ ಎಜೂಕೇಷನ್ ಸಂಸ್ಥೆಯಿಂದ ನಡೆಸಲಾದ 12 ನೇ ತರಗತಿಯಲ್ಲಿ ಅಥವಾ ಇಂಡಿಯನ್ ಸರ್ಟಿಫೀಕೇಟ್ ಆಪ್ ಸೆಕೆಂಡರಿ ಎಜೂಕೇಶನ್ ಪರೀಕ್ಷೇಯಲ್ಲಿ ಉತ್ತೀರ್ಣಾರಾಗಿರಬೇಕು |
| | ಈ ಮೇಲಿನ ಎರಡು ಶೈಕ್ಷಣಿಕವಿದ್ಯಾರ್ಹತೆಯನ್ನು ಅಭ್ಯರ್ಥಿಯು ದಿನಾಂಕ:16-11-2015 ಕ್ಕೆ ಹೊಂದಿರತಕ್ಕದ್ದು. ಈ ವಿದ್ಯಾರ್ಹತೆ ಯಲ್ಲದೇ ಬೇರೆ ಯಾವುದೇ ಸಮಾನಾಂತರ ವಿದ್ಯಾರ್ಹತೆಯನ್ನು ಪರಿಗಣಿಸಲಾಗುವುದಿಲ್ಲ. |
| | ಕಂಪ್ಯೂಟರ್ ಜ್ಞಾನವನ್ನು ಹೊಂದಿರ ತಕ್ಕದ್ದು |

| ವಯೋಮಿತಿ: | ದಿನಾಂಕ: **19-11-2015** ರಂದು ಈ ಕೆಳಗಿನಂತೆ ವಯೋಮಿತಿ ಹೊಂದಿರತಕ್ಕದ್ದು | |
|---|---|---|
| ವರ್ಗೀಕರಣದ ವಿವರ | ಕನಿಷ್ಠ | ಗರಿಷ್ಠ |
| ಪ.ಜಾ/ಪ.ಪಂ/ ಪ್ರ-1 | 18 ವರ್ಷ | 40 ವರ್ಷ |
| 2 ಎ 2 ಬಿ 3 ಎ 3 ಬಿ | 18 ವರ್ಷ | 38 ವರ್ಷ |
| ಸಾಮಾನ್ಯ ವರ್ಗ | 18 ವರ್ಷ | 35 ವರ್ಷ |

**ಅರ್ಜಿ ಸಲ್ಲಿಸುವ ವಿಧಾನ ಹಾಗೂ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:**

ಆನ್ ಲೈನ್ ಅಂತರ್ಜಾಲದ ಮೂಲಕ (Online) ಅರ್ಜಿಗಳನ್ನು ದಿನಾಂಕ: 16-10-2015 ರಿಂದ ದಿನಾಂಕ: 16-11-15 ರವರೆಗೆ ಆನ್ ಲೈನ್ ಮೂಲಕ ಸಲ್ಲಿಸಬಹುದು

| | | |
|---|---|---|
| **ಅರ್ಜಿ ಶುಲ್ಕ:** | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಅಂಗವಿಕಲ ಹಾಗೂ ಮಹಿಳಾ ಅಭ್ಯರ್ಥಿಗಳು. | **ರೂ. 100-00** |
| | ಸಾಮಾನ್ಯ ವರ್ಗ 2ಎ 2ಬಿ 3ಎ 3ಬಿ ವರ್ಗದ ಅಭ್ಯರ್ಥಿಗಳಿಗೆ. | **ರೂ. 200-00** |

**ಅರ್ಜಿ ಸಲ್ಲಿಸುವ ವಿಧಾನ:**

ಅರ್ಜಿಗಳನ್ನು ಆನ್ ಲೈನ್ (Online) (ಎಲೆಕ್ಟ್ರಾನಿಕ್ ಮಾರ್ಗ) ಮುಖಾಂತರ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ. ಅಭ್ಯರ್ಥಿಯು ಇಲಾಖೆಯ ವೆಬ್ ಸೈಟ್ http://shimogga-va.kar.nic.in ತೆರೆದು ಕಂಪ್ಯೂಟರ್ ಪರದೆಯ ಮೇಲೆ ಅರ್ಜಿಯ ನಮೂನೆಯಲ್ಲಿ ಅಭ್ಯರ್ಥಿಯು ಹೊಂದಿರುವ ಮಾಹಿತಿಯನ್ನು ತುಂಬಬೇಕು. PREVIEW ನೀಡಿದ ನಂತರದಲ್ಲಿ ಅಭ್ಯರ್ಥಿಯು Submit button ನ್ನು ಒತ್ತಿದರೆ ಅರ್ಜಿ ಸಂಖ್ಯೆ: (Refence No.) ಸೃಷ್ಟಿಯಾಗುತ್ತದೆ. ನಂತರದಲ್ಲಿ ಅಭ್ಯರ್ಥಿಯು ಸ್ವೀಕೃತಿ ಪತ್ರ (Acknowledgement SliP) ಮತ್ತು ದ್ವಿಪ್ರತಿ ಚಲನ್ ಅನ್ನು ತೆಗೆದುಕೊಳ್ಳತಕ್ಕದ್ದು. ಈ ಚಲನ್ ಅನ್ನು ಅರ್ಜಿಯ ಶುಲ್ಕದೊಂದಿಗೆ ಕೆನರಾ ಬ್ಯಾಂಕ್ ನ ಯಾವುದಾದರೂ ಶಾಖೆಯಲ್ಲಿ ಪಾವತಿಸಬಹುದು. ಅಭ್ಯರ್ಥಿಗಳು ಸ್ವೀಕೃತಿ ಸ್ಲಿಪ್ ನ್ನು ಮತ್ತು ಚಲನಿನ ಒಂದು ಪ್ರತಿಯನ್ನು ಕಡ್ಡಾಯವಾಗಿ ಇರಿಸಿಕೊಳ್ಳತಕ್ಕದ್ದು. **ಇನ್ನೊಂದು ಚಲನ್ ಪ್ರತಿ ಬ್ಯಾಂಕ್ ಬಳಿ ಇರುತ್ತದೆ. ಅಭ್ಯರ್ಥಿಗಳ ಬಳಿ ಇರುವ ಚಲನ್ ನ್ನು ಸ್ಕ್ಯಾನ್ ಮಾಡಿ ಮೇಲೆ ತಿಳಿಸಿರುವ ವೆಬ್ ಸೈಟ್ ವಿಳಾಸಕ್ಕೆ ಅಪ್ ಲೋಡ್ ಮಾಡತಕ್ಕದ್ದು.** ಈ ದಾಖಲೆಗಳನ್ನು ನಿಗದಿಪಡಿಸಿದ ದಿನಾಂಕದಂದು ಹಾಜರುಪಡಿಸತಕ್ಕದ್ದು. ಬ್ಯಾಂಕ್ ನಲ್ಲಿ ನಿಗದಿತ ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ: 19-11-2015 ರಂದು ಆಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದಿನಾಂಕ: 06-10-2015 ಅಧಿಸೂಚನೆಯನ್ನು ಜಿಲ್ಲಾಧಿಕಾರಿಗಳ ಕಛೇರಿ, ಉಪ ವಿಭಾಗಾಧಿಕಾರಿಗಳ ಕಛೇರಿ ಮತ್ತು ಜಿಲ್ಲೆಯ ಎಲ್ಲಾ ತಹಶೀಲ್ದಾರರ ಕಛೇರಿಯ ನೋಟೀಸ್ ಬೋರ್ಡಿನಲ್ಲಿ ಹಾಗೂ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದ್ದು ನೋಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಅಧಿಕೃತ ವೆಬ್ ಸೈಟ್ vashivamogga@gmail.com ನಲ್ಲಿ ಪರಿಶೀಲಿಸಬಹುದಾಗಿದೆ.

**ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ: 08182-225410.**

**ಟಿಪ್ಪಣಿ:** ಆಯ್ಕೆ ಪ್ರಕ್ರಿಯೆಯು ಅಭ್ಯರ್ಥಿಯು ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅಂಕಗಳ (On Merit) ಆಧಾರದ ಮೇಲೆ ಆಯಾ ವರ್ಗಕ್ಕೆ ಸಂಬಂಧಿಸಿದಂತೆ ಮಾತ್ರ ನಡೆಯುತ್ತದೆ.

ಜಿಲ್ಲಾಧಿಕಾರಿ ಮತ್ತು ಅಧ್ಯಕ್ಷರು,
ಗ್ರಾಮಲೆಕ್ಕಿಗರ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರ,
ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.